ಆದೇಶ ಹೊರಡಿಸಿ, ನೊಂದಣಿ ಮಾಡುವ ಸಂದರ್ಭದಲ್ಲಿ ನಿಮಗೆ ನಕ್ಷೆ ಅವಶ್ಯಕತೆ ಇಲ್ಲವೆಂದು ಹೇಳಿ ಮತ್ತೊಂದು ಆದೇಶ ಹೊರಡಿಸಿದ್ದರಿಂದಾಗಿ ಇವತ್ತು ಈ ಎಲ್ಲಾ...

ಉಪಾಧ್ಯಕ್ಷರು :– ಇದನ್ನು ಸೋಮವಾರಕ್ಕೆ ಇಟ್ಟುಕೊಳ್ಳಿ. ಈಗ ರೆವಿನ್ಯೂ ಮಂತ್ರಿಗಳು ಇಲ್ಲ. ಈಗ ಕಾಲಿಂಗ್ ಅಟೆನ್‌ಷನ್ ತೆಗೆದುಕೊಳ್ಳೋಣ. ಈಗ ರಾಜೇಂದ್ರವರ್ಮ.

ಶ್ರೀ ಎಂ. ಪಿ. ರೇಣುಕಾಚಾರ್ಯ :– ಮಾನ್ಯ ಉಪಾಧ್ಯಕ್ಷರೇ, ನನ್ನ ಮತಕ್ಷೇತ್ರದಲ್ಲಿ ಕಳೆದ ಒಂದು ತಿಂಗಳಿನಿಂದ ಇಲಿ ಜ್ವರ ಮತ್ತು ಡೆಂಗಿ ಜ್ವರದಿಂದ 11 ಜನರು ಸತ್ತಿದ್ದಾರೆ.

ಉಪಾಧ್ಯಕ್ಷರು :– ಮಾನ್ಯ ರೇಣುಕಾಚಾರ್ಯರೇ, ಏನು ಅದು....

8. ಗಮನ ಸೆಳೆಯುವ ಸೂಚನೆಗಳು.

(ಅ) ವಿಷಯ:– ಬೀದರ್ ಜಿಲ್ಲೆಯ ಆರ್.ಎಸ್.ವಿ.ವೈ. ಯೋಜನೆಯಡಿಯಲ್ಲಿ ಮಂಜೂರಾದ ಕಾಮಗಾರಿಗಳು ಪೂರ್ಣಗೊಳ್ಳುವ ಬಗ್ಗೆ.

ಶ್ರೀ ರಾಜೇಂದ್ರ ವರ್ಮಾ (ಹುಲಸೂರು) :– ಮಾನ್ಯ ಉಪಾಧ್ಯಕ್ಷರೇ, 10ನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಭಾರತ ಸರ್ಕಾರದ ಯೋಜನಾ ಆಯೋಗವು, ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ, ಹಿಂದುಳಿದ ಜಿಲ್ಲೆಗಳ ಅಭಿವೃದ್ಧಿ ಮತ್ತು ಸುಧಾರಣೆ ಯೋಜನೆಯಡಿ, ರಾಷ್ಟ್ರೀಯ ಸಮ ವಿಕಾಸ ಎಂಬ ಶೀರ್ಷಿಕೆ ಯೋಜನೆಯನ್ನು ಅನುಷ್ಟಾನಗೊಳಿಸಲು ಒಟ್ಟು ಈ ರಾಷ್ಟ್ರದೊಳಗೆ ಒಟ್ಟು ನೂರು ಜಿಲ್ಲೆಗಳನ್ನು ಆಯ್ಕೆ ಮಾಡಿದ್ದು, ಆ ಪೈಕಿ ಕರ್ನಾಟಕ ರಾಜ್ಯದಲ್ಲಿ ನಾಲ್ಕು ಜಿಲ್ಲೆಗಳು ಅವು ಬೀದರ್, ಗುಲ್ಬರ್ಗಾ, ಚಿತ್ರದುರ್ಗ, ದಾವಣಗೆರೆ, ಆಯ್ಕೆಯಾಗಿತ್ತು. ಈ ಯೋಜನೆಗೆ ಅಡ್ಡಿಯಾಗುವ ಮಾರಕಾಂಶಗಳನ್ನು ತೊಡೆದು ಹಾಕುವುದು, ಮತ್ತು ಅಭಿವೃದ್ಧಿ ಪ್ರಕ್ರಿಯೆ ತ್ವರಿತವಾಗಿ ಜಾರಿಗೆ ಬರುವುದು, ಮತ್ತು ಜನರ ಜೀವನಮಟ್ಟ ಸುಧಾರಣೆ ಮಾಡುವುದು, ಅಸಮತೋಲನೆಯ ನಿವಾರಣೆ, ಈ ಮುಖ್ಯ ಉದ್ದೇಶವನ್ನು ಈಡೇರಿಸಲು ಅನುಷ್ಟಾನಗೊಳಿಸಲಾಗಿದೆ. ಅತ್ಯಂತ ಹಿಂದುಳಿದಂಥ ಈ ಜಿಲ್ಲೆಗಳಲ್ಲಿ ಆರ್ಥಿಕ ಚಟುವಟಿಕೆಗಳು, ಶಿಕ್ಷಣ, ಆರೋಗ್ಯ, ಕೃಷಿ, ತೋಟಗಾರಿಕೆ, ಅರಣ್ಯ, ಪಶುಸಂಗೋಪನೆ, ಸಮಾಜ ಕಲ್ಯಾಣ, ಮಣ್ಣು ಮತ್ತು ಜಲಸಂರಕ್ಷಣೆ, ಕುಡಿಯುವ ನೀರಿನ ಸರಬರಾಜು, ರಸ್ತೆಗಳು, ಯೋಜನೆ, ಸಂಯೋಜನೆ, ಮತ್ತು ಮೌಲ್ಯಮಾಪನ ಮುಂತಾದವುಗಳ ಕಾರ್ಯಕ್ರಮಗಳಿಗೆ ಭಾರತ ಸರ್ಕಾರವು ಈ ಯೋಜನಾ ಆಯೋಗದಿಂದ 2004ನೇ ಸಾಲಿಗೆ ಇಟ್ಟಿದ್ದ 15 ಕೋಟಿ ರೂಪಾಯಿಗಳಲ್ಲಿ 7.5ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಪ್ರತಿವರ್ಷವೂ 15ಕೋಟಿ ರೂಪಾಯಿಗಳಲ್ಲಿ ಮೂರು ವರ್ಷಗಳಿಗೆ 45ಕೋಟಿ ರೂಪಾಯಿಗಳು ವೆಚ್ಚ ಮಾಡುವುದರಿಂದ ಹಿಂದುಳಿದ ಜಿಲ್ಲೆಗಳ ಅಭಿವೃದ್ಧಿಯಿಂದ ಪ್ರಗತಿ ಸಾಧಿಸುವ ಗುರಿಯನ್ನು ಹೊಂದಲಾಗಿದೆ. ದಿನಾಂಕ: 16.7.2005 ರಂದು ಕೇಂದ್ರಿಯ ಯೋಜನಾ ಆಯೋಗದ ರಾಜ್ಯ ಮಂತ್ರಿಗಳಾದ ಶ್ರೀ ಎಂ. ವಿ. ರಾಜಶೇಖರನ್‌ರವರ ಅಧ್ಯಕ್ಷತೆಯಲ್ಲಿ ಬೀದರ್ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ, ಆರ್.ಎಸ್.ವಿ.ವೈ. ಪ್ರಗತಿಪರ ಶೀಲ ಸಭೆಯು ನಡೆದಿತ್ತು.

ಈ ಸಭೆಯಲ್ಲಿ ಮಂತ್ರಿಗಳಾದ ಶ್ರೀ ಎಂ. ವಿ. ರಾಜಶೇಖರನ್‌ರವರು ಪ್ರಗತಿಯ ಬಗ್ಗೆ ಅಹವಾಲನ್ನು ಕೇಳಿದಾಗ, ಇನ್ನೂ ಕಾಮಗಾರಿಗಳು ಪ್ರಾರಂಭವಾಗುವ ಹಂತದಲ್ಲಿವೆ, ಎಂದು

ಅಧಿಕಾರಿಗಳು ಹೇಳಿದರು. ಇದರಿಂದ ಅಸಮಧಾನಗೊಂಡ ಮಾನ್ಯ ಮಂತ್ರಿಯವರು ಜಿಲ್ಲಾ ಪಂಚಾಯತ್ ತಾಂತ್ರಿಕ ವಿಭಾಗದವರಿಗೆ ತರಾಟೆ ತೆಗೆದುಕೊಂಡು 2004–05ನೇ ಸಾಲಿಗೆ ಎಂದು ಕೊಟ್ಟಿರುವಂತಹ ಏಳೂವರೆ ಕೋಟಿ ರೂಪಾಯಿಗಳು ಬಿಡುಗಡೆ ಮಾಡಲಾಗಿದೆ. ಈಗ ಆರ್ಥಿಕ ವರ್ಷ ಮುಗಿಯಲು ಇನ್ನು ಕೇವಲ ಎರಡು ತಿಂಗಳು ಮಾತ್ರ ಇದೆ. ತಾವು ಮಾರ್ಚ್ ತಿಂಗಳೊಳಗೆ ಹಣವನ್ನು ಖರ್ಚು ಮಾಡದೇ ಹೋದರೆ, ಎರಡನೆಯ ಕಂತಿನ ಹಣವನ್ನು ಬಿಡುಗಡೆ ಮಾಡಲು ಆಗುವುದಿಲ್ಲ, ಎಂದು ಎಚ್ಚರಿಸಿದರು. ಇಲ್ಲಿ ಅಧಿಕಾರಿಗಳ ನಿರ್ಲಕ್ಷ್ಯದಿಂದ ಯೋಜನೆ ಪ್ರಾರಂಭವಾಗದೇ ಇರುವಂಥಾದ್ದು ಸಭೆಯಲ್ಲಿ ಉಪಸ್ಥಿತರಾಗಿದ್ದ ನಾವುಗಳು, ಸಚಿವರ ಸಮ್ಮುಖದಲ್ಲೇ ಹೇಳಿದ್ದೇವೆ. ಆಗ ಆ ಯೋಜನೆಯನ್ನು ಅನುಷ್ಟಾನಗೊಳಿಸುವುದರಲ್ಲಿ ಅಧಿಕಾರಿಗಳು ನಿರ್ಲಕ್ಷ್ಯವನ್ನು ತೋರುತ್ತಿದ್ದಾರೆ. ಅದರ ವಿರುದ್ದ ಶಿಸ್ತಿನ ಕ್ರಮವನ್ನು ಜರುಗಿಸಲಾಗುವುದೆಂದು ಮಾನ್ಯ ಮಂತ್ರಿಯವರು ತಿಳಿಸಿದರು, ಹಾಗೂ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಮುಗಿಸಬೇಕೆಂದು, ಇದರಿಂದ ಕಾಮಗಾರಿಯಲ್ಲಿ ಪಾರದರ್ಶಕತೆ ಮತ್ತು ಪ್ರಾಮಾಣಿಕತೆಗೆ ಆದ್ಯತೆಯನ್ನು ಕೊಡಬೇಕೆಂದು, ಅತ್ಯಂತ ಕಳಕಳಿಯಿಂದ ಅಧಿಕಾರಿಗಳಿಗೆ ಎಲ್ಲರ ಸಮ್ಮುಖದಲ್ಲೇ ಸೂಚನೆಯನ್ನು ಕೊಟ್ಟರು. ಇದನ್ನು ಮಾರ್ಚ್ ತಿಂಗಳ ಒಳಗೆ ಕಾಮಗಾರಿಯನ್ನು ಮುಗಿಸಲಾಗುವುದೆಂದು ಅಧಿಕಾರಿಗಳು ಮಾನ್ಯ ಮಂತ್ರಿಯವರ ಎದುರು ಭರವಸೆಯನ್ನು ನೀಡಿದರು. ಆದರೆ ವಾಸ್ತವವಾಗಿ ಮಾರ್ಚ್ ತಿಂಗಳು ಮುಗಿದು ಜೂನ್ ತಿಂಗಳು ಪ್ರಾರಂಭವಾಗಿದ್ದರೂ, ಶಾಲಾ ಕೊಠಡಿಗಳ ನಿರ್ಮಾಣ ಕಾರ್ಯ ಜಿಲ್ಲೆಯ ಅನೇಕ ಕಡೆಗಳಲ್ಲಿ ಇನ್ನೂ ಪ್ರಾರಂಭವಾಗಿಲ್ಲ. ಬಹುತೇಕ ಕಾಮಗಾರಿಗಳು ಗುಲ್ಬರ್ಗಾ ಎಸ್.ಇ, ಹಾಗೂ ಬೆಂಗಳೂರು ಸಿ.ಇ.ರವರಿಂದ ಇನ್ನು ಅನುಮೋದನೆಯನ್ನು ಪಡೆದಿಲ್ಲ; ಇನ್ನೂ ಕೆಲಸ ಪ್ರಾರಂಭ ಮಾಡುವ ವಿಚಾರದಲ್ಲಿ ದೇವರೇ ಗತಿ. ಈ ರೀತಿ ಬೀದರ್ ಜಿಲ್ಲಾ ಪಂಚಾಯತ್‌ನ ಅಧಿಕಾರಿಗಳು ಮಂತ್ರಿಗಳಾದ ಶ್ರೀ ಎಂ. ವಿ. ರಾಜಶೇಖರನ್‌ರವರ ಉದ್ದೇಶವನ್ನು, ಕನಸ ಬುಟ್ಟಿಗೆ ಹಾಕಿರುತ್ತಾರೆ.

ಉಪಾಧ್ಯಕ್ಷರು :– ಮಾನ್ಯ ರಾಜೇಂದ್ರವರ್ಮಾರವರೇ, ತಾವು ಭಾಷಣವನ್ನು ಓದುತ್ತಿದ್ದೀರಲ್ಲಾ, ತಾವು ಸ್ಪಷ್ಟಿಕರಣವನ್ನು ಕೇಳಿ, ತಾವು ಮಾತನಾಡಲು ಪ್ರಾರಂಭ ಮಾಡಿ ತುಂಬಾ ಹೊತ್ತು ಆಯಿತು. ತಾವು ಸ್ಪಷ್ಟೀಕರಣವನ್ನು ಕೇಳಿ, ಆ ರೀತಿ ಹೋದರೆ ಇವೊತ್ತು ಎಲ್ಲಾ ಆಗುವುದಿಲ್ಲ. ನೀವು ಏನು ಕೇಳಬೇಕೆಂದು ಇದ್ದೀರಿ, ಅದನ್ನು ಕೇಳಿ.

ಶ್ರೀ ರಾಜೇಂದ್ರವರ್ಮಾ :– ಮಾನ್ಯ ಉಪಾಧ್ಯಕ್ಷರೇ, ಈಗ ಈ ಯೋಜನೆ ರಾಷ್ಟ್ರದಲ್ಲಿ ಮಾನ್ಯ ಅಟಲ್‌ಬಿಹಾರಿ ವಾಜಪೇಯಿಯವರ ನೇತೃತ್ವದಲ್ಲಿ ಸರ್ಕಾರ 100 ಜಿಲ್ಲೆಗಳಿಗೆ ಆಯ್ಕೆ ಆಗಿದ್ದು, ಅದನ್ನು 45ಕೋಟಿ ರೂಪಯಿಗಳನ್ನು ಮೂರು ವರ್ಷಕ್ಕೆ 15ಕೋಟಿ ರೂಪಾಯಿಗಳನ್ನು ಕೊಡುವಂತಹ ಯೋಜನೆಯನ್ನು ಹಾಕಿಕೊಂಡರು. ಇದು 2004–05ರಲ್ಲಿ ಮುಗಿಸಬೇಕಾಗಿತ್ತು. ಇನ್ನು ಶಾಲಾ ಕಟ್ಟಡಗಳು ಇಲ್ಲ, ಸಿಸಿ ರೋಡ್‌ಗಳು ಇಲ್ಲ, ಕುಡಿಯುವ ನೀರಿನ ವ್ಯವಸ್ಥೆ ಇಲ್ಲ, ಕಮ್ಯುನಿಟಿ ಹಾಲ್‌ಗಳು ಇಲ್ಲ, ಇದು ನಾವು 2004ರಲ್ಲಿ ಮುಗಿಸಬೇಕಾಗಿತ್ತು. ಈಗ ಎರಡನೆಯ ಕಂತಿನ ದುಡ್ಡು ಬರಬೇಕಾಗಿತ್ತು. ಆ ಹಣ ಯಾವ ಕಾರಣಕ್ಕಾಗಿ ಬಂದಿಲ್ಲ. ಇದು ಎಸ್.ಸಿ. ಮತ್ತು ಸಿಇಲ್ಲೂ ಸಹಿತ ಕೆಲಸವನ್ನು ಅಪ್ರೂವಲ್ ಮಾಡಿಲ್ಲ. ಇದು ಎಸ್ಟಿಮೇಟ್ ಏನು ಬಂದಿತ್ತು, ಅದನ್ನು ಅಪ್ರೂವ್ ಮಾಡಿಲ್ಲ. ಅದಕ್ಕೆ ನಾನು ಹೇಳುವಂತಹ ತಾತ್ಪರ್ಯವೇನೆಂದರೆ, ಬೀದರ್ ಜಿಲ್ಲೆ ಅತೀ ಹಿಂದುಳಿದ ಪ್ರದೇಶ, ಈ ರಾಷ್ಟ್ರದಲ್ಲಿ ಅನೇಕ ಜನರು ಪ್ರಧಾನಮಂತ್ರಿಗಳಾಗಿ ಹೋದರು. ಆದರೆ ಇಂತಹ ಮಹತ್ವದ ಯೋಜನೆಯನ್ನು ಯಾವ ಪ್ರಧಾನಮಂತ್ರಿಗಳೂ ಹಾಕಿಕೊಂಡಿಲ್ಲ. ಈ ಒಂದು ಒಳ್ಳೆಯ ಉದ್ದೇಶದಿಂದ, ಇದರಿಂದ ರೈತರಿಗೆ ಒಳ್ಳೆಯದಾಗಬೇಕು, ಬಡವರಿಗೆ ಒಳ್ಳೆಯದಾಗಬೇಕು, ದೀನದಲಿತರಿಗೆ

ಒಳ್ಳೆಯದಾಗಬೇಕೆಂಬ ಉದ್ದೇಶದಿಂದ ಈ ಕಾರ್ಯ ಯೋಜನೆಯನ್ನು ಮಾಡಿದ್ದಾರೆ. ಅದಕ್ಕಾಗಿ ನಾನು ತಮ್ಮ ಮುಖಾಂತರ ಸರ್ಕಾರದ ಗಮನವನ್ನು ಸೆಳೆಯುತ್ತೇನೆ. ಈ ಕೆಲಸ ಯಾವ ಕಾರಣದಿಂದ ಪ್ರಾರಂಭವಾಗಿಲ್ಲ, ಇದನ್ನು ನಾನು ಒತ್ತಾಯ ಮಾಡುತ್ತೇನೆ, ಈ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತಾರೆ? ಮತ್ತು ಯಾವ ಅಧಿಕಾರಿಗಳು ಇದಕ್ಕೆ ಕಾರಣ ಆಗಿದ್ದಾರೆ? ಅವರ ಮೇಲೆ ಯಾವ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುತ್ತೀರೆಂಬ ಬಗ್ಗೆ ಈ ಸದನದಲ್ಲಿ ಸ್ಪಷ್ಟವಾಗಿ ಹೇಳಬೇಕೆಂದು ವಿನಂತಿ ಮಾಡುತ್ತೇನೆ.

ಡಾ: ಹೆಚ್. ಸಿ. ಮಹದೇವಪ್ಪ (ಗ್ರಾಮೀಣಾಬಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವರು) :– ಮಾನ್ಯ ಉಪಾಧ್ಯಕ್ಷರೇ, ಬೀದರ್ ಜಿಲ್ಲೆಯ ರಾಷ್ಟ್ರೀಯ ಸಮ ವಿಕಾಸ ಯೋಜನೆಯನ್ನು ಭಾರತ ಸರ್ಕಾರದ ಯೋಜನಾ ಆಯೋಗದ ಅಧಿಕಾರಯುಕ್ತ ಸಮಿತಿಯು ದಿನಾಂಕ: 17.2.2004 ರಂದು ಅನುಮೋದಿಸಿದೆ. ದಿನಾಂಕ: 21.6.2004 ರಂದು ಹಾಗೂ ದಿನಾಂಕ: 6.7.2004ರಲ್ಲಿ ತಲಾ 375 ಲಕ್ಷ ರೂ.ಗಳಂತೆ ಒಟ್ಟು 750 ಲಕ್ಷ ರೂಗಳನ್ನು ಬೀದರ್ ಜಿಲ್ಲೆಗೆ ಈ ಯೋಜನೆಗೆ ಬಿಡುಗಡೆ ಮಾಡಲಾಗಿದೆ. ಲೋಕಸಭಾ ಉಪಚುನಾವಣೆಯಿಂದಾಗಿ ಹಾಗೂ ಟೆಂಡರ್ ಕಾರ್ಯ ವಿಧಾನಗಳಿಂದಾಗಿ ಈ ಯೋಜನೆಯನ್ನು ಪ್ರಾರಂಭಿಸಲು ಸ್ವಲ್ಪ ವಿಳಂಬವಾಗಿತ್ತು. ಈಗ ಈ ಯೋಜನೆಯನ್ನು ತ್ವರಿತಗತಿಯಲ್ಲಿ ಅನುಷ್ಠಾನಗೊಳಿಸುತ್ತಿದ್ದು, ಈಗಾಗಲೇ ಮೇ 2005ರ ಅಂತ್ಯದಲ್ಲಿ ರೂ. 534 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಸಧ್ಯದಲ್ಲಿಯೇ ಮುಂದಿನ ಕಂತಿನ ಹಣವನ್ನು ಬಿಡುಗಡೆ ಮಾಡಲು ಭಾರತ ಸರ್ಕಾರವನ್ನು ಕೋರಲಾಗುವುದು.

ಮಾನ್ಯ ಉಪಾಧ್ಯಕ್ಷರೇ, ಈ ಮಧ್ಯೆ ಪಾರ್ಲಿಮೆಂಟ್‌ನ ಚುನಾವಣೆ ಬಂದಿದ್ದರಿಂದ, ಟೆಂಡರ್ ಕೆಲಸವನ್ನು ಮಾಡುವುದು ತಡವಾಗಿದ್ದರಿಂದ, ಮುಂದಿನ ಹಣವನ್ನು ತೆಗೆದುಕೊಳ್ಳಲಾಗಲಿಲ್ಲ. ಈಗ ಏನು ಹಣ ರಿಲೀಜ್ ಆಗಿದೆ, ಇದನ್ನು ಭಾರತ ಸರ್ಕಾರಕ್ಕೆ ಕೇಳಿದ್ದೇವೆ ಅದನ್ನು ಕೊಡುತ್ತಾರೆ.

ಶ್ರೀ ರಾಜೇಂದ್ರವರ್ಮಾ :– ಮಾನ್ಯ ಉಪಾಧ್ಯಕ್ಷರೇ, ಈಗ ಎರಡನೆಯ ಮತ್ತು ಮೂರನೆಯ ಕಂತನ್ನು ಎಲ್ಲಾ ಜಿಲ್ಲೆಗಳಲ್ಲಿ ಖರ್ಚು ಮಾಡಿದ್ದಾರೆ. ಈಗ ನಮ್ಮ ಜಿಲ್ಲೆಯಲ್ಲಿ ಕೆಲಸವೇ ಆಗಿಲ್ಲ, ಈಗ ಎರಡನೆಯ ಕಂತಿನ ಬಿಡುಗಡೆ ಮಾಡುವಂಥಾದ್ದು ಇರಬೇಕಲ್ಲಾ...

ಡಾ: ಹೆಚ್. ಸಿ ಮಹದೇವಪ್ಪ :– ಈಗ 534 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ.

ಶ್ರೀ ರಾಜೇಂದ್ರವರ್ಮಾ :– ಮಾನ್ಯ ಉಪಾಧ್ಯಕ್ಷರೇ, ಈಗ ಎರಡು ವರ್ಷಗಳಿಂದ ಕೆಲಸವಾಗಿಲ್ಲ, ಟೆಂಡರ್ ಕರೆದಿಲ್ಲ, ಈ ರೀತಿಯಾದರೆ ಗ್ರಾಮೀಣ ಪ್ರದೇಶದಲ್ಲಿರುವಂತಹ ಬಡವರು, ಕೂಲಿ ಕಾರ್ಮಿಕರು, ದೀನದಲಿತರ ಪರಿಸ್ಥಿತಿ ಏನು? ಸರ್ಕಾರದಲ್ಲಿ ದುಡ್ಡು ಉಳಿಯಲಿಲ್ಲ, ಕೆಲಸ ಆಗಲಿಲ್ಲ, ನೀವು ಆ ಹಣವನ್ನು ಖರ್ಚು ಮಾಡುವಂಥಾದ್ದು ಆಗಲಿಲ್ಲ. ಇದನ್ನು ಹೇಳುವಂಥ ಮಾತಲ್ಲ. ನಮ್ಮ ಕೇಂದ್ರ ಸರ್ಕಾರ ಆಯೋಗದ ಮಂತ್ರಿಯವರ ಸಮ್ಮುಖದಲ್ಲಿ ಚರ್ಚೆ ಯಾಗಿರುವಂಥಾದ್ದು.

ಡಾ: ಹೆಚ್. ಸಿ ಮಹದೇವಪ್ಪ :– ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ 750 ಲಕ್ಷ ರೂಪಾಯಿಗಳು ಬಿಡುಗಡೆಯಾಗಿ, 530 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈಗ ಟೆಂಡರ್ ಹಾಕಿದ್ದೇವೆ. ಈ ಮಧ್ಯೆ ಪಾರ್ಲಿಮೆಂಟ್‌ಗೆ ಬೈ ಎಲೆಕ್ಷನ್ ಬಂತು. ಆದುದರಿಂದ ತಡವಾಯಿತು, ಇನ್ನು ಉಳಿದಂತಹ ದುಡ್ಡನ್ನು ನಾವು ಕೇಂದ್ರ ಸರ್ಕಾರದ ಯೋಜನಾ ವಿಭಾಗವನ್ನು ಕೇಳಿದ್ದೇವೆ. ಅದನ್ನು ಮಂಜೂರು ಮಾಡಿಕೊಡುತ್ತಾರೆ.

ದುಡ್ಡು ಕೊಡದೇ, ಕೆಲಸ ಹೇಗೆ ಆಗುತ್ತದೆ?

ಡಾ: ಹೆಚ್. ಸಿ ಮಹದೇವಪ್ಪ :– ನಾವು ಹಣವನ್ನು ಕೇಳಿದ್ದೇವೆ. ಖರ್ಚು ಮಾಡಿದ್ದೇವೆಂದು ಹೇಳಿದ್ದೇವೆ.

ಶ್ರೀ ರಾಜೇಂದ್ರವರ್ಮಾ :– ಈಗ ಉದಾಹರಣೆಗಾಗಿ ಹಳ್ಳಿಕೆಡ್ ಗ್ರಾಮಕ್ಕೆ ಸಿಸಿರೋಡ್‌ಗೆ ಟೆಂಡರ್ ಮಾಡಿದ್ದೀರಿ. ಇದು ಎರಡು ವರ್ಷಗಳಿಂದಲೂ ಟೆಂಡರ್ ಆಗುತ್ತಾ ಇದೆ, ಮತ್ತೆ ಹುಲಸೂರುನಲ್ಲಿ ಟೆಂಡರ್ ಕರೆದಿದ್ದೀರಿ, ಇದು ಎರಡು ವರ್ಷದಿಂದ ಟೆಂಡರ್ ಆಗುತ್ತಾ ಇದೆ. ನಿಮ್ಮ ಅಧಿಕಾರಿಗಳು ಏಕೆ ಇದರ ಬಗ್ಗೆ ಕಾಳಜಿಯನ್ನು ತೋರಿಸುತ್ತಾ ಇಲ್ಲ?

ಡಾ: ಹೆಚ್. ಸಿ ಮಹದೇವಪ್ಪ :– ಮಾನ್ಯ ಉಪಾಧ್ಯಕ್ಷರೇ, ಈಗ 750 ಲಕ್ಷ ರೂಪಯಿಗಳಲ್ಲಿ 530 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, ನೀವು ಹೋಗಿ ನೋಡಿ.

ಶ್ರೀ ರಾಜೇಂದ್ರವರ್ಮಾ :– ಮಾನ್ಯ ಉಪಾಧ್ಯಕ್ಷರೇ, ನಾನೇ ಹೇಳುತ್ತಿದ್ದೇನೆ. ಇದಕ್ಕೆ ಸಂಬಂಧಪಟ್ಟಂತಹ ಮಂತ್ರಿಯವರು...

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರಾದ ರಾಜೇಂದ್ರವರ್ಮಾರವರು, ಕೇಳುತ್ತಿರುವಂಥಾದ್ದು 750 ಲಕ್ಷ ರೂಪಾಯಿಗಳು ಬಿಡುಗಡೆಯಾಗಿರುವಂಥಾದ್ದಲ್ಲಿ ಸರ್ಕಾರ 530 ಲಕ್ಷ ರೂಪಾಯಿಗಳಿಗೆ ಖರ್ಚು ಮಾಡಿದ್ದೇವೆ, ಟೆಂಡರ್ ಕರೆದಿದ್ದೇವೆಂದು ಹೇಳುತ್ತಿದ್ದಾರೆ. ಅಲ್ಲಿ ಏನೂ ಕೆಲಸವಾಗಿಲ್ಲ, ಬೋಗಸ್ ಎಕ್ಸ್‌ಪೆಂಡಿಚರ್ ಬುಕ್ ಆಗಿದೆ. ಅದಕ್ಕೆ ತಾವು ತನಿಖೆ ಮಾಡಿಸಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಅದಕ್ಕೆ ಸರ್ಕಾರ ಉತ್ತರವನ್ನು ಕೊಡಬೇಕಾಗುತ್ತದೆ.

ಡಾ: ಹೆಚ್. ಸಿ ಮಹದೇವಪ್ಪ :– ಆ ರೀತಿ ಇದ್ದರೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ :– ಶಾಸಕರು ನಿರ್ದಿಷ್ಟವಾಗಿಯೇ ಹೇಳುತ್ತಿದ್ದಾರೆ. ಅವರು ಫೀಲ್ಡ್‌ನಲ್ಲಿರುವುದರಿಂದ, ಅಲ್ಲಿ ಕೆಲಸವೇ ಆಗಿಲ್ಲ, ಬೋಗಸ್ ಬಿಲ್ ಮಾಡಿದ್ದಾರೆಂದು ಹೇಳುತ್ತಿದ್ದಾರೆ.

ಡಾ: ಹೆಚ್. ಸಿ ಮಹದೇವಪ್ಪ :– ನಿರ್ದಿಷ್ಟವಾಗಿದ್ದರೆ ಕೊಡಿ, ಕ್ರಮ ತೆಗೆದುಕೊಳ್ಳುತ್ತೇನೆ. ಕೆಲಸವನ್ನೇ ಮಾಡದೆ ದುರುಪಯೋಗ ಮಾಡಿದ್ದರೆ ಅಂಥವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ. ನಿಮ್ಮ ಹತ್ತಿರ ನಿರ್ದಿಷ್ಟವಾದ ಮಾಹಿತಿ ಇದ್ದರೆ, ಇಂಥಿಂಥ ಕಡೆ ಹಣ ಖರ್ಚು ಮಾಡಿಲ್ಲ, ದುರುಪಯೋಗ ಮಾಡಿದ್ದಾರೆ ಎನ್ನುವ ಮಾಹಿತಿ ನಿಮ್ಮ ಕಡೆ ಇದ್ದರೆ ಅದನ್ನೂ ಕೊಡಿ. We will get it enquired. We will take approvprite action.

ಶ್ರೀ ಗೋವಿಂದ ಎಂ. ಕಾರಜೋಳ :– ಸದಸ್ಯರು ಈ ಸದನದಲ್ಲಿ ನಿರ್ದಿಷ್ಟವಾಗಿಯೇ ಹೇಳುತ್ತಿದ್ದಾರೆ. ಹಣ ಖರ್ಚಾಗಿಲ್ಲ ಎಂದು ಆರೋಪ ಮಾಡುತ್ತಿದ್ದಾರೆ. ಅದಕ್ಕಾಗಿ ಸೆಕ್ರೆಟೇರಿಯೆಟ್‌ನಿಂದ ಒಬ್ಬ ಅಧಿಕಾರಿಯನ್ನು ಅಲ್ಲಿಗೆ ಕಳುಹಿಸಿ, ತನಿಖೆ ಮಾಡಿಸಿ.

ಉಪಾಧ್ಯಕ್ಷರು :– ಆಯಿತು, ಕುಳಿತುಕೊಳ್ಳಿ.

ಉಪಾಧ್ಯಕ್ಷರು :– ಈಗ ಹೆಚ್. ಸಿ. ಬಾಲಕೃಷ್ಣರವರು
(ಸದಸ್ಯರು ಹಾಜರಿರಲಿಲ್ಲ)

ಉಪಾಧ್ಯಕ್ಷರು:– ಈಗ ಪ್ರಕಾಶ್ ಖಂಡ್ರೆಯವರು.
(ಸದಸ್ಯರು ಹಾಜರಿರಲಿಲ್ಲ)

ಉಪಾಧ್ಯಕ್ಷರು:– ಈ ಅಲ್ಲೋಡ್ ಹನುಮಂತಪ್ಪನವರು.

(ಅ) ವಿಷಯ:– ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕು ವ್ಯಾಪ್ತಿಯಲ್ಲಿರುವ ನಾರಾಯಣಪುರ ಬಲದಂಡೆ ಕಾಲುವೆಗಳ ಕಾಮಗಾರಿಗಳಲ್ಲಿ ನಡೆದಿರುವ ಭ್ರಷ್ಟಾಚಾರ ಹಾಗೂ ಕಾಮಗಾರಿಯ ವಿಳಂಬದ ಬಗ್ಗೆ.

ಶ್ರೀ ಅಲ್ಲೋಡ್ ವೈ. ಹನುಮಂತಪ್ಪ (ದೇವದುರ್ಗ) : ಮಾನ್ಯ ಉಪಾಧ್ಯಕ್ಷರೆ, ನನ್ನ ಮತಕ್ಷೇತ್ರವಾದ ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆ, ಉಪ ಕಾಲುವೆ, ಉಪ ವಿತರಣಾ ಕಾಲುವೆಗಳು ಹಾಗೂ ಹೊಲ ಕಾಲುವೆಗಳಲ್ಲಿ ಸರ್ಕಾರದ ನಿಯಮಾವಳಿಗಳನ್ನು ಗಾಳಿಗೆ ತೂರಿ ಗುತ್ತಿಗೆದಾರರು ಮತ್ತು ಅಭಿಯಂತರರುಗಳು ಶಾಮೀಲಾಗಿ ತಮ್ಮ ಮನ ಬಂದಂತೆ ಕಾಮಗಾರಿಗಳನ್ನು ನಿರ್ಮಾಣ ಮಾಡಿದ್ದು, ಇದರಲ್ಲಿ ಭಾರೀ ಭ್ರಷ್ಟಾಚಾರ ನಡೆದಿರುವ ಬಗ್ಗೆ ಹಾಗೂ ಕಾಮಗಾರಿಗಳು ವಿಳಂಬವಾಗುತ್ತಿರುವ ಬಗ್ಗೆ ಮಾನ್ಯ ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರ ಗಮನವನ್ನು ಸೆಳೆದು, ಅದಕ್ಕೆ ಸರ್ಕಾರದ ಉತ್ತರವನ್ನು ಬಯಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಬೃಹತ್, ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಸಚಿವರು) (ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೇ, ಕೃಷ್ಣಾ ಮೇಲ್ದಂಡೆ ಯೋಜನೆ ಹಂತ 2 ರಲ್ಲಿ ನಾರಾಯಣಪುರ ಬಲದಂಡೆ ಕಾಲುವೆ ನಿರ್ಮಾಣಗೊಳಿಸಲಾಗುತ್ತಿದ್ದು, ಸದರಿ ಕಾಲುವೆ ಸ್ಕೀಂ 'ಎ' ಅಡಿಯಲ್ಲಿ ಒಟ್ಟು ಉದ್ದ 95 ಕಿ.ಮೀ. ಆಗಿದ್ದು, ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನ 12,000 ಹೆ. ಪ್ರದೇಶ ಹಾಗೂ ದೇವದುರ್ಗ ತಾಲ್ಲೂಕಿನ 72,000 ಹೆ. ಪ್ರದೇಶ ಹೀಗೆ ಒಟ್ಟು 84,000 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿರುತ್ತದೆ. ಸದರಿ ಯೋಜನೆಯ ಕಾಮಗಾರಿಗಳು 1995–96ನೇ ಸಾಲಿನಲ್ಲಿ ಪ್ರಾರಂಭಗೊಂಡಿರುತ್ತದೆ. ಈಗಾಗಲೇ ಯೋಜನೆಯ ಮುಖ್ಯ ಕಾಲುವೆಯ 95 ಕಿ.ಮೀ. ಉದ್ದ ಹಾಗೂ ವಿತರಣಾ ಕಾಲುವೆ 1 ರಿಂದ 14 ರಡಿಯ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

2. ನಾರಾಯಣಪುರ ಬಲದಂಡೆ ಕಾಲುವೆಯ ಕಿ.ಮೀ. 42 ರಿಂದ ಹಾಗೂ ವಿತರಣಾ ಕಾಲುವೆ 9 ರಿಂದ 18 ರಡಿಯ ಕಾಮಗಾರಿಗಳು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಮೇಲೆ ತಿಳಿಸಿರುವಂತೆ ಈಗಾಗಲೇ ಮುಖ್ಯ ಕಾಲುವೆಯ ಹಾಗೂ ವಿತರಣಾ ಕಾಲುವೆ 9 ರಿಂದ 14 ರಡಿಯ ಕಾಮಗಾರಿಗಳು ಪೂರ್ಣಗೊಂಡಿದ್ದು, ನೀರಾವರಿ ಸೌಲಭ್ಯ, ಸಹ ಕಲ್ಪಿಸಲಾಗಿದೆ. ವಿತರಣಾ ಕಾಲುವೆ 15, 16 ಹಾಗೂ 18 ರಡಿಯ ಉಪ ವಿತರಣಾ ಕಾಲುವೆ ಹಾಗೂ ಲ್ಯಾಟರಲ್ ಕಾಮಗಾರಿಗಳು ಪ್ರಗತಿಯ ವಿವಿಧ ಹಂತಗಳಲ್ಲಿವೆ. ಸದರಿ ಬಾಕಿ ಎಲ್ಲಾ ಕಾಮಗಾರಿಗಳನ್ನು ಮಾರ್ಚ್ 2006ರ ಅಂತ್ಯಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.